ಶ್ರೀ ಗೋವಿಂಧ ಎಂ ಕಾರ್‌ಜೋಳ್ : ಮಾನ್ಯ ಅಧ್ಯಕ್ಷರೆ, ನಾವು ನಿಯಮ 69ರ ಅಡಿಯಲ್ಲಿ ಕೊಟ್ಟಿದ್ದೇವೆ.

ಅಧ್ಯಕ್ಷರು : ತಾವು ನಿಯಮ 69ರ ಅಡಿಯಲ್ಲಿ ನೋಟೀಸ್ ಕೊಟ್ಟಿದ್ದರೆ ಅದಕ್ಕೆ ನಾನು ಸಮಯ ನಿಗಧಿ ಮಾಡಬೇಕು. ಈಗ ನೀವು ನಿಂತಲ್ಲಿ ಪ್ರಸ್ತಾಪ ಮಾಡಿದರೆ ಹೇಗೆ?

ಶ್ರೀ ಗೋವಿಂದ ಎಂ ಕಾರ್‌ಜೋಳ್ : ಮಾನ್ಯ ಅಧ್ಯಕ್ಷರೇ, ಸಮಯ ನಿಗದಿ ಮಾಡಿ.

ಅಧ್ಯಕ್ಷರು : ಆಯಿತು. ನಾನು ಸಮಯ ನಿಗದಿ ಮಾಡುತ್ತೇನೆ. ತಾವು ಕುಳಿತುಕೊಳ್ಳಿ.

ಶ್ರೀ ಹೆಚ್. ಹಾಲಪ್ಪ (ಹೊಸನಗರ) : ಮಾನ್ಯ ಅಧ್ಯಕ್ಷರೆ, ಹೊಸನಗರ ತಾಲ್ಲೂಕಿನಲ್ಲಿ ಇವತ್ತು ಎಲ್ಲಾ ಪಕ್ಷದವರೂ ಸೇರಿ ಪೋಲೀಸ್ ಸ್ಟೇಷನ್ ಮುಂದೆ ಮುತ್ತಿಗೆ ಹಾಕಿದ್ದಾರೆ ಮತ್ತು ಅಲ್ಲಿ ಧರಣಿ ನಡೆಯುತ್ತಿದೆ. ಅದಕ್ಕೆ ಕಾರಣ ನಮ್ಮ ತಾಲ್ಲೂಕಿನ ಪ್ರತಿಷ್ಠಿತ ಕುಟುಂಬದ ಅಣ್ಣ ತಮ್ಮಂದಿರ ಒಂದು ಸಣ್ಣ ಜಗಳದಲ್ಲಿ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಒಬ್ಬ ಅಣ್ಣ ಮತ್ತು ತಮ್ಮನನ್ನು ಸೆಕ್ಷನ್ 506 ಹಾಕಿ ಅರೆಸ್ಟ್ ಮಾಡಿ ಜೈಲಿಗೆ ಕಳುಹಿಸಿದ್ದಾರೆ. ಇದರಿಂದ ಇಡೀ ತಾಲ್ಲೂಕಿನಲ್ಲಿ ಇವತ್ತು ಗೊಂದಲಮಯ ವಾತಾವರಣ ಇದೆ. ಮತ್ತು ಪ್ರಕುಬ್ದ ವಾತಾವರಣ ಇದೆ. ಅಲ್ಲಿ ಪಕ್ಷಾತೀತವಾಗಿ ಧರಣಿ ನಡೆಸುತ್ತಿದ್ದಾರೆ. ಆ ಸಬ್ ಇನ್ಸ್‌ಪೆಕ್ಟರ್ ಬಗ್ಗೆ ನಾನು ಈ ಹಿಂದೆಯೂ ಸಹ ಮುಖ್ಯಮಂತ್ರಿಗಳಿಗೆ ಮತ್ತು ಮೇಲಧಿಕಾರಿಗಳಿಗೆ ತಿಳಿಸಿದ್ದೆ, ಅವರು ಜನರ ಪರವಾದ ಕೆಲಸಗಳನ್ನು ಮಾಡುವುದನ್ನು ಬಿಟ್ಟು ಅವರ ಕೆಲಸಗಳನ್ನು ಮಾಡಿಕೊಳ್ಳುವುದರಲ್ಲಿ ನಿರತರಾಗಿದ್ದಾರೆ, ಈಗಲೂ ಸಹ ಅದೇ ಕೆಲಸ ಮಾಡಿ ಇಡೀ ತಾಲ್ಲೂಕಿನಲ್ಲಿ ಪ್ರಕುಬ್ದವಾದ ವಾತಾವರಣ ಉಂಟಾಗಿದೆ. ಎಲ್ಲಾ ಪಕ್ಷದವರು ಧರಣಿ ಮಾಡುತ್ತಿದ್ದಾರೆ. ಸರ್ಕಾರ ಈ ಅಧಿಕಾರಿ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಈ ವಿಚಾರವಾಗಿ ಸೂಕ್ತವಾದ ವಿಚಾರಣೆ ಮಾಡಿ ಸಂಬಂಧಪಟ್ಟವರು ತಪ್ಪಿತಸ್ಥರು ಇದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಊ) ವಿಷಯ : ರಾಣಿಬೆನ್ನೂರು ತಾಲ್ಲೂಕಿನಲ್ಲಿ ಆಶ್ರಯ ಯೋಜನೆಯ ನಿವೇಶನಗಳ ಹಕ್ಕುಪತ್ರಗಳಲ್ಲಿ ಮಾಜಿ ಶಾಸಕರ ಭಾವ ಚಿತ್ರ ಮುದ್ರಿಸಿರುವ ಬಗ್ಗೆ.

ಶ್ರೀ ನೆಹರು ಒಲೇಕಾರ್ ಚನ್ನಬಸಪ್ಪ (ಬ್ಯಾಡಗಿ) : ಮಾನ್ಯ ಅಧ್ಯಕ್ಷರೆ, ನಮ್ಮ ಬ್ಯಾಡಗಿ ಕ್ಷೇತ್ರಕ್ಕೆ ಸಂಬಂಧಪಟ್ಟಂತ ರಾಣಿಬೆನ್ನೂರು ತಾಲ್ಲೂಕಿನ 36 ಹಳ್ಳಿಗಳು ಸೇರಿವೆ. ಆ 36 ಹಳ್ಳಿಗಳಲ್ಲಿ ಆಶ್ರಯ ಯೋಜನೆ ಅಡಿಯಲ್ಲಿ ನಿವೇಶನ ಹಕ್ಕುಪತ್ರವನ್ನು ಕೊಡುವಂತಹ ಸಂದರ್ಭದಲ್ಲಿ ಇಲ್ಲಿ ಹಿಂದಿನ ಶಾಸಕರನ್ನು ಹಾಗೂ ಮಾಜಿ ಮುಖ್ಯಮಂತ್ರಿಗಳು ಪೋಟೋಗಳನ್ನು ಪ್ರಿಂಟ್ ಮಾಡಿಸಿ ಕೊಟ್ಟಿದ್ದಾರೆ. ಇದು ಸರ್ಕಾರದ ಕಾನೂನಿಗೆ ವೈತಿರಕ್ತವಾಗಿ ಅಧಿಕಾರಿಗಳು ರಾಣಿಬೆನ್ನೂರು ಕ್ಷೇತ್ರದಲ್ಲಿ ನಡೆದುಕೊಳ್ಳುತ್ತಿದ್ದಾರೆ. ಅ ಅಧಿಕಾರಿಗಳಿಗೆ ಎಷ್ಟೇ ಹೇಳಿದರೂ ಕೆಲವು ಏಜೆಂಟರನ್ನು ಮಾಡಿಕೊಂಡಿದ್ದಾರೆ. ಆ ಅಧಿಕಾರಿಗಳಿಗೆ ಎಷ್ಟೇ ಹೇಳಿದರೂ ಕೆಲವು ಏಜೆಂಟರನ್ನು ಮಾಡಿಕೊಂಡಿದ್ದಾರೆ. ಯಾವ ಯಾವ ಹಳ್ಳಿಗೆ ಪಟ್ಟಾಗಳನ್ನು ಕೊಡಬೇಕು ಆ ಪಟ್ಟಾಗಳನ್ನು ಏಜೆಂಟರ ಮುಖಾಂತರ ಕೊಟ್ಟು ಆ ಏಜೆಂಟರ ಮನೆಗಳಲ್ಲಿ ಇವತ್ತಿಗೂ ಸಾಕಷ್ಟು ಪಟ್ಟಾಗಳು ಇವೆ. ಆ ಪಟ್ಟಾಗಳನ್ನು ಆ ಜನರಿಗೆ ಆ ಏಜೆಂಟರು 2 ಸಾವಿರ 3 ಸಾವಿರ ತೆಗೆದುಕೊಂಡು ಕೊಡುವಂತಹ ವ್ಯವಸ್ಥೆ ಈಗಲೂ ನಡೆಯುತ್ತಾ ಇದೆ. ರಾಣಿಬೆನ್ನೂರು ಶಾಸಕರು ಮತ್ತು ನಾವು ಸಾಕಷ್ಟು ಸಲ ಹೇಳಿದರೂ ಸಹ ಇದುವರೆಗೂ